# ಮಹೇಶ್ ಪಿ.ಯು ಕಾಲೇಜ್

ನಾಗರಭಾವಿ, ಬೆಂಗಳೂರು-560072

aglasem.com

ದ್ವಿತೀಯ ಪಿ.ಯು.ಸಿ (ವಾಣಿಜ್ಯ ವಿಭಾಗ) **ಮಧ್ಯವಾರ್ಷಿಕ ಪರೀಕ್ಷೆ**

ಅವಧಿ: 3 ಗಂಟೆ 15 ನಿಮಿಷ | ವಿಷಯ: ಕನ್ನಡ | ಗರಿಷ್ಠ ಅಂಕಗಳು:80

ಅ-ವಿಭಾಗ

**I.** ಈ ಕೆಳಗಿನ ಪ್ರಶ್ನೆಗಳಿಗೆ ನೀಡಿರುವ ಉತ್ತರಗಳಲ್ಲಿ ಸರಿಯಾದುದನ್ನು ಆರಿಸಿ ಬರೆಯಿರಿ. **10X1=10**

(1) ನಿಷ್ಪ್ರಯೋಜಕನಾದ ಮಗ ಯಾರು?
(ಅ) ಮುಪ್ಪಿನಲ್ಲಾಗದವನು (ಆ) ಹಠಗಾರನು (ಇ) ಚಟಗಾರನು (ಈ) ಹಣವಂತನು

(2) ತಾಯಿಯನ್ನು ಯಾವುದಕ್ಕೆ ಹೋಲಿಸಲಾಗಿದೆ?
(ಅ) ದೇವರಿಗೆ (ಆ) ವೃಕ್ಷಕ್ಕೆ (ಇ) ಜ್ಯೋತಿಗೆ (ಈ) ಮಮತೆಗೆ

(3) ಜೇನ್ನೊಣದ ಹೆದೆಗೆ ಹೂಬಾಣ ಹೂಡಿದವರು ಯಾರು?
(ಅ) ಬ್ರಹ್ಮ (ಆ) ವಿಷ್ಣು (ಇ) ಶಿವ (ಈ) ಮಾರ

(4) ಸೀತೆಯನ್ನು ರಾವಣ ಎಲ್ಲಿರಿಸಿದ್ದನು?
(ಅ) ಅಶೋಕವನ (ಆ) ಪ್ರಮದವನ (ಇ) ಬೃಂದಾವನ (ಈ) ನಕ್ಷತ್ರವನ

(5) ಲೇಖಕಿಯ ಪತಿ ಯಾವ ತೊಂದರೆಯಿಂದ ಬಳಲಿದರು?
(ಅ) ಹೊಟ್ಟೆನೋವು (ಆ) ತಲೆನೋವು (ಇ) ಕಣ್ಣುನೋವು (ಈ) ಬೆನ್ನುನೋವು

(6) ಕನ್ನಡದ ಮೂಲಕ ಕಲಿತು ಶ್ರೇಷ್ಠ ವಿಜ್ಞಾನಿಯಾದವರು ಯಾರು?
(ಅ) ಡಾ.ಸಿ.ವಿ. ರಾಮನ್ (ಆ) ಅಬ್ದುಲ್ ಕಲಾಂ (ಇ) ಡಾ.ಸಿ.ಎನ್.ಆರ್. ರಾವ್ (ಈ) ಅಲೆಗ್ಸಾಂಡರ್

(7) ಧಣಿಗಳ ಹೆಸರೇನು?
(ಅ) ವೆಂಕಟಪ್ಪ (ಆ) ನಾರಾಯಣಪ್ಪ (ಇ) ವೆಂಕಟರಮಣ (ಈ) ವೆಂಕಪ್ಪಯ್ಯ

(8) ರಹಮಾನ್ 'ಐ ವಿಟ್‌ನೆಸ್' ಎಂದು ಯಾರನ್ನು ತೋರಿಸಿದನು?
(ಅ) ರಶೀದಾ (ಆ) ಜುಬೇದ (ಇ) ಫಾತಿಮಾ (ಈ) ಅಂಜುಂ

(9) ಕೃಷ್ಣೇಗೌಡರ ಆನೆ ಮೊದಲು ಯಾವ ಮಠದಲ್ಲಿತ್ತು?
(ಅ) ಕಾಳಿಕಾ (ಆ) ಶಿವಗಂಗೆ (ಇ) ಗೂಳೂರು (ಈ) ಮುರುಘ

(10) ಆನೆ ಇಲ್ಲದ್ದರಿಂದ ವೇಲಾಯುಧ ಎಲ್ಲಿ ಕೆಲಸಕ್ಕೆ ಸೇರಿದ?
(ಅ) ಶಿವೇಗೌಡರ ಸಾಮಿಲ್ಲಿನಲ್ಲಿ (ಆ) ವೆಟರ್ನರಿ ಆಸ್ಪತ್ರೆಯಲ್ಲಿ
(ಇ) ಫಾರೆಸ್ಟ್ ಡಿಪಾರ್ಟ್‌ಮೆಂಟ್‌ನಲ್ಲಿ (ಈ) ಮುನ್ಸಿಪಾಲಿಟಿಯಲ್ಲಿ

(ಆ) ಬಿಟ್ಟ ಸ್ಥಳಗಳಿಗೆ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ. **5X1=5**
(ಕಮಲಮ್ಮ, ರುದ್ರಪ್ಪ, ಹೈದ್ರಾಬಾದ್, ಕುದುಪನಿಗೆ, ಚಹಾಗಿಡದ, ಚಂದ್ರಪ್ಪ)

(11) ಬಸಲಿಂಗ ವೈದ್ಯರಿಗಾಗಿ ಅಲೆದಾಗ ಜೊತೆಗಿದ್ದ ರಾಜಕಾರಣಿ ____________ .
(12) ವಾಲ್‌ಪರೈನ ದುರಂತದ ಮೂಲ ಬೀಜಗಳು ____________ ರೂಪದಲ್ಲಿ ಬಂದವು.
(13) ಕಿಡ್ನಿಸ್ಟೋನ್ ಬಗ್ಗೆ ತಿಳಿಯಲು ಲೇಖಕಿ ____________ರವರನ್ನು ಭೇಟಿ ಮಾಡಿದರು.
(14) ಎ.ಆರ್. ಕೃಷ್ಣಶಾಸ್ತ್ರಿಗಳು ____________ ನಲ್ಲಿ ನಡೆದ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು?
(15) ಧಣಿಗಳು ಹೊಳೆಯ ಹೂಳೆತ್ತಲು ____________ ಸೂಚಿಸಿದರು.

(ಇ) ಹೊಂದಿಸಿ ಬರೆಯಿರಿ. **5X1=5**

| | |
|---|---|
| (16) ನಾಗಚಂದ್ರ | (ಅ) ನಾರಣಪ್ಪ |
| (17) ಬಸವಣ್ಣ | (ಆ) ಪಗೆಯಂ ಬಾಲಕನೆಂಬರೇ |
| (18) ಕುಮಾರವ್ಯಾಸ | (ಇ) ಅಭಿನವ ಪಂಪ |
| (19) ಪುಲಿಗೆರೆ ಸೋಮನಾಥ | (ಈ) ಭಕ್ತಿ ಭಂಡಾರಿ |
| (20) ಪುರಂದರ ದಾಸರು | (ಉ) ದ.ರಾ. ಬೇಂದ್ರೆ |
| | (ಊ) ಜಾಲಿಯ ಮರದಂತೆ |

schools.aglasem.com
aglasem.com

## ಆ-ವಿಭಾಗ

**II.** (ಅ) ಯಾವುದಾದರೂ ಮೂರು ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿರಿ. **3X2=6**

(21) ರಾವಣನು ಸೊಕ್ಕಿನಿಂದ ಸೀತೆಯನ್ನುದ್ದೇಶಿಸಿ ಆಡಿದ ಮಾತುಗಳಾವುವು?

(22) ಹೆಂಡತಿಯ ಹಠಕ್ಕಾಗಿ ಗಂಡುಗೂಸು ಏನು ಮಾಡುತ್ತಾನೆ?

(23) ರಾಜ ಮತ್ತು ಮಂತ್ರಿಗಳಿಗೆ ಯಾವ ಅರ್ಹತೆಗಳಿರಬೇಕೆಂದು ಸೋಮನಾಥನು ಹೇಳಿದ್ದಾನೆ?

(24) ಹಡೆದ ತಂದೆ-ತಾಯಿಯರ ಮಹತ್ವ ತಿಳಿಸಿರಿ.

(ಆ) ಯಾವುದಾದರೂ ಎರಡು ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿರಿ. **2X2=4**

(25) ಮಾರ್ಗನನ್ನು ಕಂಡು ಆದಿವಾಸಿಗಳು ಹೇಗೆ ಪ್ರತಿಕ್ರಿಯಿಸಿದರು?

(26) ಕಮಲ ಮೇಡಂ ವೈದ್ಯರ ಯಾವ ಸಲಹೆಯನ್ನು ರೂಢಿಸಿಕೊಂಡರು?

(27) ತ್ರಿಭಾಷಾ ಸೂತ್ರದ ಬಳಕೆ ಹೇಗಿರಬೇಕು?

(28) ಧಣಿಗಳು ಹೊಲೆಯನ್ನು ಹೇಗೆ ಮೂದಲಿಸುತ್ತಿದ್ದರು?

(ಇ) ಯಾವುದಾದರೂ ಮೂರು ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ. **3X2=6**

(29) ದುರ್ಗಪ್ಪ ಏಕೆ ಬಂದಿರಬಹುದೆಂದು ನಿರೂಪಕರು ಯೋಚಿಸಿದರು?

(30) ಕಾಡಾನೆಗಳ ಹಾವಳಿಗೆ ಪ್ರಕಾಶ್ ನೀಡಿದ ಕಾರಣಗಳೇನು?

(31) ನಾಗರಾಜ ದುರ್ಗಪ್ಪನ ಮೇಲೆ ಏನೆಂದು ರೇಗಿದನು?

(32) ತನ್ನ ಕೆಲಸ ಅತ್ಯಂತ ಅಪಾಯಕಾರಿಯೆಂದು ದುರ್ಗಪ್ಪ ವಿವರಿಸಿದ್ದು ಹೇಗೆ?

## ಇ-ವಿಭಾಗ

**III.** (ಅ) ಯಾವುದಾದರೂ ಎರಡು ವಾಕ್ಯಗಳ ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ. **2X3=6**

(33) ಅಸಾಧ್ಯಮಪ್ಪ ಮರುವಕ್ಕಮಿಲ್ಲ.

(34) ಅನ್ಯಲಿಂಗಗಳ ನೆನೆವನೆ ನಿಮ್ಮ ಭಕ್ತನು.

(35) ಕೆಲವಂ ಬಲ್ಲವರಿಂದ ಕಲ್ತು

(ಆ) ಯಾವುದಾದರೂ ಒಂದು ವಾಕ್ಯದ ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ. **1X3=3**

(36) ಮುಂಬಯಿಯ ಪ್ರಸಿದ್ಧ ನ್ಯಾಯವಾದಿಯಾದರು.

(37) ಒಂದೊಂದು ಭಾಷೆಯೂ ಒಂದೊಂದು ವರ.

(ಇ) ಯಾವುದಾದರೂ ಒಂದು ವಾಕ್ಯದ ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ. **1X3=3**

(38) ವೆಪನ್ ಸಾರ್, ವೆಪನ್ ನಮಗೆ ಮುಖ್ಯ.

(39) ಕುಶಾಲಿಗಂತ ಸೊಂಡಿಲು ಬೀಸಿದರೆ ಸಾಕಲ್ಲ.

## ಈ-ವಿಭಾಗ

**IV.** (ಅ) ಯಾವುದಾದರೂ ಎರಡು ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿರಿ. **2X4=8**

(40) ರಕ್ಷಿಸಬೇಕಾದವರೆ ಭಕ್ಷಕರಾದರೆ ಒದಗುವ ವಿಘಟನೆಯನ್ನು ಬಸವಣ್ಣನವರು ಹೇಗೆ ಚಿತ್ರಿಸಿದ್ದಾರೆ?

(41) ದ್ರೌಪದಿ ಅವಮಾನಕ್ಕೊಳಗಾದ ಮೂರು ಪ್ರಸಂಗಗಳನ್ನು ವಿವರಿಸಿ.

(42) ಮಾನವನ ಜೀವನದ ಸಾರ್ಥಕತೆ ಎಲ್ಲಿದೆಯೆಂದು ಕವಿ ಬೇಂದ್ರೆ ಹೇಳಿದ್ದಾರೆ?

(43) ಯಾವ ಯಾವ ಸಂಗತಿಗಳನ್ನು ಉಪೇಕ್ಷಿಸಬಾರದಾಗಿ ಸೋಮನಾಥನು ತಿಳಿಸಿದ್ದಾನೆ?

schools.aglasem.com
aglasem.com

(ಆ) ಯಾವುದಾದರೂ ಒಂದು ಪ್ರಶ್ನೆಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ. 1X4=4

(44) ಬಸಲಿಂಗ ಎದುರಿಸುತ್ತಿದ್ದ ಸಮಸ್ಯೆಗಳು ಯಾವುವು?

(45) ಸೀತಾ ಎಂಬ ಗೆಳತಿಯ ಗುಣ-ಸ್ವಭಾವವನ್ನು ಲೇಖಕಿ ಹೇಗೆ ಚಿತ್ರಿಸಿದ್ದಾರೆ?

(46) ಕನ್ನಡಿಗರೆನ್ನಿಸಿಕೊಳ್ಳಲು ಯಾವ ಯೋಗ್ಯತೆಯ ಪ್ರಶ್ನೆಗಳು ನಮ್ಮನ್ನು ಚುಚ್ಚಬೇಕು? ವಿವರಿಸಿ.

(ಇ) ಯಾವುದಾದರೂ ಒಂದು ಪ್ರಶ್ನೆಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿರಿ. 1X4=4

(47) ಅರಣ್ಯ ಇಲಾಖೆಯ ಶತ್ರುಗಳ ಕಾರ್ಯಭಾರವನ್ನು ನಾಗರಾಜ ವಿವರಿಸಿದ್ದು ಹೇಗೆ?

(48) ಪುಟ್ಟಯ್ಯ ತನ್ನ ಅಸಹಾಯಕತೆಯನ್ನು ಹೇಗೆ ವಿವರಿಸುತ್ತಾನೆ?

## ಭಾಷಾಭ್ಯಾಸ

V. (ಅ) ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ ನಾಲ್ಕಕ್ಕೆ ಸೂಚನೆಗೆ ಅನುಗುಣವಾಗಿ ಉತ್ತರಿಸಿ. 4X2=8

(49) ಕೆಳಗಿನ ಎರಡು ಪದಗಳಿಗೆ ನಾನಾರ್ಥಗಳನ್ನು ಬರೆಯಿರಿ.

(ಅ) ಹೊಳೆ (ಆ) ಗಂಡ (ಇ) ನೆನೆ

(50) ಕೆಳಗಿನ ಎರಡು ನುಡಿಗಟ್ಟುಗಳನ್ನು ಸ್ವಂತ ವಾಕ್ಯದಲ್ಲಿ ಬರೆಯಿರಿ.

(ಅ) ಕೈಯೊಡ್ಡು (ಆ) ರೈಲುಬಿಡು (ಇ) ಸಿಂಹಸ್ವಪ್ನ

(51) ಕೆಳಗಿನ ಎರಡು ಪದಗಳಿಗೆ ಗುಣವಾಚಕಗಳನ್ನು ಬರೆಯಿರಿ.

(ಅ) ಬಿನ್ನಾಣದ ಮಾತು (ಆ) ಹಸಿರುಕಂಬಳಿ (ಇ) ಎಡಗಣ್ಣು

(52) ಕೆಳಗಿನ ಎರಡು ಕ್ರಿಯಾಪದಗಳ ಧಾತುರೂಪವನ್ನು ಬರೆಯಿರಿ.

(ಅ) ತಿಂದನು (ಆ) ಹೋಯಿತು (ಇ) ನೋಡಿದನು

(53) ಕೆಳಗಿನ ಎರಡು ಪದಗಳಿಗೆ ನಿಷೇದಾರ್ಥಕ ಪದ ಬರೆಯಿರಿ.

(ಅ) ಕೇಳುವರು (ಆ) ಕರೆಯಿತು (ಇ) ಆಡಿದರು

(54) ಯಾವುದಾದರೂ ಎರಡು ದ್ವಿರುಕ್ತಿ ಪದಗಳನ್ನು ಬರೆಯಿರಿ.

(ಆ) ಯಾವುದಾದರೂ ಒಂದನ್ನು ಕುರಿತು ಪ್ರಬಂಧ ಬರೆಯಿರಿ. 1X4=4

(55) ಸ್ತ್ರೀ ಭ್ರೂಣಹತ್ಯೆಯಿಂದ ಎದುರಾಗುವ ಸಮಸ್ಯೆಗಳು.

ಅಥವಾ

ಕೃಷಿ ಸಂಸ್ಕೃತಿಯನ್ನು ಉಳಿಸಿ- ಬೆಳೆಸುವ ಅಗತ್ಯ.

(ಇ) ಯಾವುದಾದರೂ ಒಂದನ್ನು ಕುರಿತು ಪತ್ರ ಬರೆಯಿರಿ. 1X4=4

(56) ದ್ವಿತೀಯ ಪಿಯುಸಿ ತೇರ್ಗಡೆ ಹೊಂದಿರುವ ನೀವು ವರ್ಗಾವಣೆ ಪತ್ರ ಮತ್ತು ಅಂಕಪಟ್ಟಿ ಕೋರಿ ಪ್ರಾಚಾರ್ಯರಿಗೆ ಒಂದು ಪತ್ರ ಬರೆಯಿರಿ.

ಅಥವಾ

ಶೈಕ್ಷಣಿಕ ಪ್ರವಾಸಕ್ಕೆ ಅನುಮತಿ ಕೋರಿ ತಂದೆ/ತಾಯಿಗೆ ಒಂದು ಪತ್ರ ಬರೆಯಿರಿ.

schools.aglasem.com

AglaSem Earn while Learn Program. Send your papers and get paid.
Contact: support@aglasem.com
aglasem.com